




■ ಬನವಾಸಿ ವೆಂಕಟೇಶ ದೀಕ್ಷಿತ್
ಕಲೆ: ಮೋನಪ್ಪ ಎಚ್.ಎಸ್.

## ಶಾಣಪ್ಪನವರ ಮಾಂಸದೂಟ ಪ್ರೀತಿ

ಮಂಚದ ಮೇಲೆ ಸುಮ್ಮನೆ ಅಡ್ಡಾದವಳಿಗೆ ಆನಂದನೊಡನೆ ಆಡಿದ, ಆಡದೆ ಬಿಟ್ಟ ಮಾತು ಕಾಡುತ್ತಿತ್ತು. ಆ ಮನೆ ಕಲಬುರ್ಗಿಯ ಜೇವರಗಿ ರಸ್ತೆಯಲ್ಲಿತ್ತು. ಅವಳಿಗಾಗ ಏಳೊ ಅಥವಾ ಎಂಟು ಇರಬಹುದು. ಸ್ವಲ್ಪ ದೂರ ನಡೆಯಬೇಕಾದ ಸರಕಾರಿ ಶಾಲೆಗೆ ಸೇರಿಸಿದ್ದಳು ಅಮ್ಮ. ಎರಡನೆ ಕ್ಲಾಸಿಂದ ಅಲ್ಲೇ ಓದಿದ್ದು.

ರಸ್ತೆಯಲ್ಲಿ ಸರಕಾರಿ ಬಸ್ಸು, ಸಾಮಾನು ತುಂಬಿದ ಲಾರಿಗಳು, ಕಾರು ಮೋಟಾರು ಸೈಕಲ್ಲುಗಳು ಸದ್ದು ಮಾಡುತ್ತಿರುತ್ತಿದ್ದವು. ಮನೆ ರಸ್ತೆಯಿಂದ ಸ್ವಲ್ಪ ಒಳಗಿತ್ತು. ದೊಡ್ಡಮನೆ. ಹಜಾರದಲ್ಲಿ, ನಾಕೂ ಕೋಣೆಗಳಲ್ಲಿ ನೆಲಕ್ಕೆ ಶಹಬಾದಿ ಫರಸಿಕಲ್ಲು ಕೂಡಿಸಿದ್ದರು. ಎದುರಿನ ಅಂಗಳದಲ್ಲಿ ಮೂರು ಬೇವಿನಮರ. ತುಳಸಿಕಟ್ಟೆ. ಅವನ್ನೆಲ್ಲ ಒಳಗೊಂಡು ಮನೆಯನ್ನು ಸುತ್ತುಗಟ್ಟಿದ ತಂತಿಬೇಲಿ. ಹಿಂದುಗಡೆ ಸ್ನಾನಕ್ಕೆ ಅಂತ ಶಹಬಾದಿ ಕಲ್ಲುಚೂರುಗಳನ್ನೇ ಬಳಸಿ ಕಟ್ಟಿದ ಗೋಡೆ ಮೇಲೆ ಕಲ್ಲುಚಪ್ಪಡಿಗಳನ್ನೇ ಹೊದೆಸಿ ಮಾಡಿದ ಮಾಡು. ಹೆಂಗಸರು ಮೂತ್ರಕ್ಕೆ ಬಚ್ಚಲನ್ನೇ ಉಪಯೋಗಿಸುತ್ತಿದ್ದರು. ಮತ್ತೊಂದಕ್ಕೆ ಹೆಂಗಸರು ಗಂಡಸರು ಭೇದವಿಲ್ಲದೆ, ಸ್ವಲ್ಪ ದೂರದಲ್ಲಿ ಶುರುವಾಗುವ ಜಾಳುಜಾಳಾದ ಕುರುಚಲುಕಾಡಲ್ಲಿ ತುಂಬಿಕೊಂಡ ಮುಳ್ಳುಜಾಲಿಯ ಹಿಂಡಿನ ಮರೆ ಹುಡುಕಿ ಹೋಗುತ್ತಿದ್ದರು.

ಶಾಣಪ್ಪನವರಿಗೆ ಶಹಬಾದಿ ಕಲ್ಲಿನ ಏಜೆನ್ಸಿ, ನೆಹರುಗಂಜಿನಲ್ಲಿ ಅಡತಿ ಅಂಗಡಿಯಲ್ಲದೆ ಎಷ್ಟೊ ಲೇವಾದೇವಿಯಲ್ಲಿ ಪಾಲುದಾರಿಕೆಯಿತ್ತು. ಕಲಬುರ್ಗಿಯಲ್ಲಿ ಹೆಸರಿದ್ದ ಮನುಷ್ಯ. ವ್ಯವಹಾರದಲ್ಲಿ ವ್ಯಸ್ತನಾಗಿರುತ್ತಿದ್ದ ಆತ ಮನೆಗೆ ವಾರದಲ್ಲಿ ಒಂದೆರಡು ದಿನ ಬರುತ್ತಿದ್ದ. ಆತನದು ಕಡುಕಪ್ಪು ಬಣ್ಣ.